**ಗಂಡ:** ನಂಗೆ ನಿನ್ನ ಎಕ್ಸ್ ಬಾಯ್ ಫ್ರೆಂಡ್ ಲವ್ ಸ್ಟೋರಿ ಹೇಳು.
**ಹೆಂಡ್ತಿ:** ಅವ್ನಾ... ಅವ್ನೆಷ್ಟು ರೊಮ್ಯಾಂಟಿಕ್ ಗೊತ್ತಾ. ಫಸ್ಟ್ ಟೈಮ್ ಅವ್ನು ನಂಗ್ ಪ್ರಪೋಸ್ ಮಾಡಿ ಹಣೆಗೆ ಕಿಸ್ ಮಾಡಿ ಹಾಗೇ ಎಸ್ಕೇಪ್ ಆದ ಗೊತ್ತಾ?
**ಗಂಡ:** ಯಾರ್ ಜೊತೆ..?

***

**ಗುಂಡ:** (ಮಹಡಿ ಮೇಲೆ ಬಂದು ಹಾಡಿದ) ಬಾನಲ್ಲೂ ನೀನೆ ಬುವಿಯಲ್ಲೂ ನೀನೆ...
**ಹೆಂಡತಿ:** (ಅಲ್ಲಿಗೆ ಬಂದ) ರೀ... ಪಕ್ಕದ್ಮನೆ ಬುವಿ ಊರಿಗ್ ಹೋಗವ್ಳೆ. ಸುಮ್ನೆ ಬನ್ನಿ!

***

**ಗುಂಡ:** ಯಾಕೊ ನಿನ್ ಲವರ್‌ಗೆ ಹೊಡೀತಾ ಇದೀಯಾ?
**ಕೃಷಿಕ್:** ಇವ್ಳು ನನ್ ಬಿಟ್ಟು ಯಾರನ್ನೋ ಲವ್ ಮಾಡ್ತವ್ಳೆ. ಅದ್ಕೆ ಹೊಡೆದೆ.
**ಗುಂಡ:** ಅದೆಂಗ್ ಹೇಳ್ತಿಯೊ?
**ಕೃಷಿಕ್:** ಮೂರ್ ತಿಂಗಳಿಂದ ನನ್ ಹತ್ರ ಕರೆನ್ಸಿಗೆ ಕಾಸ್ ಕೇಳ್ತಿಲ್ವೊ!

***

**ಅತಿಥಿಗೃಹದಲ್ಲಿ ಕಸಬರಿಕೆ ಎತ್ತಿದ ಪ್ರಿಯಾಂಕ**



ಹೆಣ್ಮಕ್ಕಳ ಆಯುಧಕ್ಕೆ ರಾಜಕೀಯ ಪ್ರಾಧಾನ್ಯತೆ ಸಿಕ್ಕಿತು

**ಗುಂಡ:** ಶಾನ್ವಿ ನಾನು ನಿನ್ನ ತುಂಬ ದಿನದಿಂದ ಲವ್ ಮಾಡ್ತಾ ಇದೀನಿ.
**ಶಾನ್ವಿ:** ಸಾರಿ ಗುಂಡ. ನಾನೂ ತುಂಬಾ ದಿನದಿಂದ ನಿನ್ ಫ್ರೆಂಡ್ ಕೃಷಿಕ್‌ನ ಲವ್ ಮಾಡ್ತಾ ಇದೀನಿ. ನಾನ್ ನಿನ್ನ ರಿಜೆಕ್ಟ್ ಮಾಡ್ದೆ ಅಂತ ನೀನ್ ಸೂಸೈಡ್ ಮಾಡ್ಕೊಬೇಡ.
**ಗುಂಡ:** ಅಯ್ಯ ನಾನ್ ಯಾಕ್ ಸೂಸೈಡ್ ಮಾಡ್ಕೊಳ್ಳಿ, 'ನೀನ್ ಯಾರನ್ನೋ ಲವ್ ಮಾಡ್ತಾ ಇದೀಯ. ಅದನ್ನ ಕಂಡುಹಿಡಿದ್ರೆ ನಿಂಗೆ ₹50,000 ಕೊಡ್ತೀನಿ' ಅಂತ ನಿಮ್ಮಪ್ಪ ಹೇಳವ್ನೆ!

***

**ಸುಬ್ಬಿ:** ಬೇಬಿ ನಿನ್ ನಂಬರ್ ಸಿಗ್ಬಹುದಾ?
**ಗುಂಡ:** ಹೇ ನಿಂಗೇನ್ ಬುದ್ಧಿ ಇದ್ಯಾ ಇಲ್ವೊ. ಪಕ್ಕದಲ್ಲೇ ನಮ್ ಹುಡ್ಗಿ ಇರೋವಾಗ 1234567891 ಅಂತ ನನ್ ಮೊಬೈಲ್ ನಂಬರ್ ಹೇಳೋಕೆ ಆಗುತ್ತಾ?
**ಗುಂಡನ ಹುಡುಗಿ:** ಬೇಬಿ ನೀನೆಷ್ಟ ಒಳ್ಳೆಯವ್ನು!

***

ಗುಂಡ ಫ್ರೀ ಹಗ್ ಅಂತ ಬರೆದಿರುವ ಬೋರ್ಡ್ ಹಿಡ್ಕೊಂಡಿದ್ದ!
**ಮಂಡ:** ಯಾಕೋ ಗುಂಡ. ಬೋರ್ಡ್ ಹಿಡ್ಕೊಂಡ್ ನಿಂತಿದ್ಯಾ?
**ಗುಂಡ:** ಯಾಕೋ ಇಲ್ವೊ. ಮೊನ್ನೆ ಫ್ರೀ ಹಗ್ ಅಂತ ಬರೆದಿದ್ದ ಬೋರ್ಡ್ ಹಿಡ್ಕೊಂಡಿದ್ದ ಹುಡ್ಗೀನ ಅಪ್ಕೊಳ್ಳೊಕೆ ಹುಡುಗ್ರು ಕ್ಯೂನಲ್ಲಿ ನಿಂತಿದ್ರು. ಅದ್ಕೆ ನಾನೂ ಹಿಡ್ಕೊಂಡಿದ್ದೀನಿ. ಆದ್ರೆ ಒಬ್ರೂ ನನ್ ಹತ್ರಾನೂ ಸುಳೀತಿಲ್ವೊ!

***

**ಗುಂಡ:** ಡಾಕ್ಟ್ರೇ ನಂಗೆ ಕೆಮ್ಮು ವಾಸೀನೆ ಆಗ್ಲಿಲ್ಲ. ವೆರೈಟಿ ಔಷಧಿ ಏನಾದ್ರೂ ಕೊಡಿ.
**ಪಾನಪ್ರಿಯ ಡಾಕ್ಟ್ರು:** ಓಲ್ಡ್ ಮಾಂಕ್, ವಿಸ್ಕಿ, ರಮ್ಮು, ಬ್ಲಾಕ್ ಡಾಗ್ ಬರೆದಿದ್ದೀನಿ ತಗೋ ಹೋಗ್!

***

**ಗುಂಡ:** ಲೇ, ಸುಬ್ಬಿ, ಬರ್ತಾ ಬರ್ತಾ ನಿಂದು ಅತಿಯಾಯ್ತು! ನೀನು ಹೀಗೇ ಮಾಡ್ತಾ ಇದ್ರೆ ಹಲ್ಲು ಉದುರಿಸಿ ಬಿಡ್ತೀನಿ ನೋಡ್ತಾ ಇರು!
**ಸುಬ್ಬಿ:** ಹೌದೌದು, ಉದುರಿಸದೇ ಏನ್ ಮಾಡ್ತೀರಿ, ಎಷ್ಟಾದ್ರೂ ನೀವು ಹಲ್ಲಿನ ಡಾಕ್ಟರ್ ಅಲ್ವಾ? ಎಷ್ಟು ಬೇಕಾದ್ರೂ ಉದುರಿಸಿ ಬಿಡ್ತೀರಿ ಬಿಡಿ!

***

ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಂಡು ಕಿರುಚಿದಳು!
**ಸುಬ್ಬಿ:** ರೀ, ಇಲ್ ನೋಡ್ರಿ ನಮ್ಮ ಕನ್ನಡಿಯಲ್ಲಿ ಭೂತ ಕಾಣಿಸ್ತಾ ಇದೆ!
**ಗುಂಡ:** ಲೇ, ಲೇ, ಜೋರಾಗಿ ಕಿರುಚಬೇಡ್ವೇ, ಅದು ನಿನ್ನದೇ ಮುಖ! ಆ ದರಿದ್ರ ಫೇಶಿಯಲ್ ಮುಖಕ್ಕೆ ಹಚ್ಚಿಕೊಳ್ಳಬೇಡಾ ಅಂತ ನಾನೆಷ್ಟು ಬಡ್ಕೊಂಡರೂ ನೀನು ಎಲ್ಲಿ ಕೇಳ್ತೀಯಾ?

***

**ಗುಂಡ:** ನೋಡೋ ಮಗನೇ, ನಾವೆಲ್ಲಾ ಬಹಳ ಚೆನ್ನಾಗಿ ಉದ್ಧಾರ ಆಗಬೇಕು ಅಂದ್ರೆ ಶಾಂತಿ ಇಂದ ಮಾತ್ರ ಒಂದು ಒಳ್ಳೆಯ ದೇಶ ಕಟ್ಟಲು ಸಾಧ್ಯ!
**ಮರಿ ಗುಂಡ:** ಅಯ್ಯೋ, ಬಿಡಪ್ಪ. ಪಕ್ಕದ ಮನೆ ಶಾಂತಿಗೆ ನೆಟ್ಟಗೆ ಹೂ ಕಟ್ಟೋಕೆ ಸರಿಯಾಗಿ ಬರಲ್ಲ. ಇನ್ನು ದೇಶವನ್ನ ಹೇಗೆ ಕಟ್ಟುತ್ತಾಳೆ?

ಸಂಗ್ರಹ:
ಆರ್. ಮನೋಜ್, ಕೋಲಾರ

